

## ಇಂಡಿಯಾಆನ್‌ಲೈನ್

ಭಾರತದಲ್ಲಿ ಒಂದೇ ಸಮನೆ ಹೆಚ್ಚುತ್ತಿರುವ ಮೊಬೈಲ್ ಬಳಕೆದಾರರ ಆಸಕ್ತಿ ಮತ್ತು ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು ಇಂಡಿಯಾಆನ್‌ಲೈನ್.ಇನ್ ತಾಣವು ಮೊಬೈಲ್.ಇಂಡಿಯಾಆನ್‌ಲೈನ್.ಇನ್/ಇಂಡೆಕ್ಸ್ ಎಂಬ ಆ್ಯಪ್ ಹೊರತಂದಿದೆ. ಇದರಲ್ಲಿ ತಾಜಾ ಸುದ್ದಿ, ನಗರದ ಮಾರ್ಗದರ್ಶಿ, ನಗೆಹನಿಗಳು, ನಿಮ್ಮ ದೂರುದುಮ್ಮಾನಗಳು, ಭವಿಷ್ಯ, ಜಾಹೀರಾತು ಮೊದಲಾದ ವಿಭಾಗಗಳಿವೆ. ಸ್ಥಳೀಯ ಉದ್ಯಮಗಳು ತಮ್ಮ ಜಾಹೀರಾತನ್ನು ಪೋಸ್ಟ್ ಮಾಡಿ ತಮ್ಮ ವಹಿವಾಟನ್ನು ಹೆಚ್ಚಿಸಿಕೊಳ್ಳಬಹುದು. ನೀರು, ವಿದ್ಯುತ್, ರಸ್ತೆ ಮೊದಲಾದ ಸಮಸ್ಯೆಗಳನ್ನು ಹಂಚಿಕೊಂಡು, ದೂರನ್ನು ನೀಡಬಹುದು. ಈ ಆ್ಯಪ್ ಬಿಡುಗಡೆಯಾದ ಕೆಲವೇ ದಿನಗಳಲ್ಲಿ ಡೌನ್‌ಲೋಡ್ ಮಾಡಿಕೊಂಡವರ ಸಂಖ್ಯೆ 80 ಸಾವಿರ ದಾಟಿದೆ.

## ಎಲ್ಲೊ

ಕೆಲವು ತಿಂಗಳುಗಳ ಹಿಂದೆ ಆರಂಭವಾದ ಈ ಸಾಮಾಜಿಕ ಜಾಲತಾಣಕ್ಕೆ ಯೂಸರ್‌ನೇಮ್ ನೋಂದಣಿ ಮಾಡಿಕೊಳ್ಳಲು ಜನರ ನೂಕುನುಗ್ಗಲಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಬಹುತೇಕ ಆ್ಯಪ್‌ಗಳಿಗೆ ಆದಂತೆ ಎಷ್ಟು ವೇಗವಾಗಿ ಬಂತೋ ಅಷ್ಟೇ ಶೀಘ್ರವಾಗಿ ಇದು ಕಣ್ಮರೆಯಾಯಿತು. ಈಗ ಮತ್ತೆ ಉಚಿತ ಐಒಎಸ್ ಆ್ಯಪ್ ಅನ್ನು ಎಲ್ಲೋ ಬಿಡುಗಡೆ ಮಾಡಿದ್ದು, ಇದರ ಮೂಲಕ ನಿಮ್ಮ ಐಫೋನ್ ಅಥವಾ ಐಪ್ಯಾಡ್‌ನಿಂದ ಎಲ್ಲೋ ಖಾತೆಗೆ ಸಂಪರ್ಕ ಪಡೆಯಬಹುದು. ಸಾಮಾಜಿಕ ಜಾಲತಾಣ ಜಾಲಾಡುವ ಎಲ್ಲಾ ಟೂಲ್‌ಗಳು ಇದರಲ್ಲಿವೆ.






## ಗೂಗ್ಲ್ ಫೋಟೋಸ್

ಆ್ಯಂಡ್ರಾಯ್ಡ್ ಫೋನಿನಲ್ಲಿ ಕ್ಲೌಡ್‌ಗೆ ಫೋಟೋಗಳನ್ನು ಅದಾಗೇ ಅಪ್‌ಲೋಡ್ ಮಾಡುವ ಆ್ಯಪ್ ಇದು. ಸಂಗ್ರಹಕ್ಕೆ ಯಾವುದೇ ಮಿತಿ ಇಲ್ಲ. ಜೊತೆಗೆ ಕೆಲವು ತಮಾಷೆ ಸೃಷ್ಟಿಸುವ ಟೂಲ್‌ಗಳಿವೆ. ಫೇಸ್‌ಬುಕ್, ಫ್ಲಿಕರ್, ಒನ್‌ಡ್ರೈವ್ ಮೊದಲಾದವುಗಳ ಮೂಲಕ ಫೋಟೋಗಳನ್ನು ಕ್ಲೌಡ್‌ಗೆ ಅಪ್‌ಲೋಡ್ ಮಾಡಬಹುದಾದರೂ ಅವುಗಳ ಸಾಮರ್ಥ್ಯಕ್ಕೆ ಮಿತಿ ಇದೆ. ಇದರಲ್ಲಿ 16 ಮೆಗಾಪಿಕ್ಸೆಲ್‌ವರೆಗೂ ಸಂಗ್ರಹ ಮಾಡಬಹುದು. ಇದನ್ನು ಗೂಗ್ಲ್ ಪ್ಲೇನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ನಿಮ್ಮ ಎಲ್ಲಾ ಫೋಟೋಗಳು ಬ್ಯಾಕಪ್‌ಗೆ ಹೋಗುತ್ತವೆ ಹಾಗೂ ಅವುಗಳನ್ನು ಸುಲಭವಾಗಿ ಪತ್ತೆ ಮಾಡಬಹುದು. ಶೇರ್ ಕೂಡಾ ಮಾಡಬಹುದು.



## ಪ್ಯಾಟ್‌ಪ್ಯಾಟ್

ಐಒಎಸ್ ಮತ್ತು ಆ್ಯಂಡ್ರಾಯ್ಡ್‌ನ ಇದು ತಾಯಿ ಹಾಗೂ ಮಗುವಿನ ನಿತ್ಯದ ಅವಶ್ಯಕತೆಗಳನ್ನು ಪೂರೈಸುವ ಆ್ಯಪ್. ಸಾಂಪ್ರದಾಯಕ ಮಾರಾಟ ಮಳಿಗೆಯಲ್ಲಿರುವ ದರಕ್ಕಿಂತ ಶೇ. 90ರಷ್ಟು ಕಡಿಮೆ ದರಕ್ಕೆ ತಾಯಿ ಹಾಗೂ ಮಗುವಿನ ಉಡುಪು, ಮಗುವಿನ ಆಟಿಕೆಗಳು, ಎಲೆಕ್ಟ್ರಾನಿಕ್ಸ್ ವಸ್ತುಗಳು, ಗೃಹ ಬಳಕೆ ಉಪಕರಣಗಳು ಲಭ್ಯ. ಇತ್ತೀಚಿನ ಫ್ಯಾಷನ್ ಟ್ರೆಂಡ್ ಬಗ್ಗೆ ವಿವರಗಳಿರುತ್ತವೆ. ಇದರಲ್ಲಿ ಮಧ್ಯವರ್ತಿಗಳ ರಗಳೆಯಿಲ್ಲ. ನೇರವಾಗಿ ತಯಾರಕರನ್ನು ಸಂಪರ್ಕಿಸಬಹುದು.

■ ಎಸ್. ತುಂಬೆ